# ಆಹಾ ಸುದ್ದಿ!

★ ಸಸಿತೋಟ

ಹುಡುಗನೊಬ್ಬ ಹುಡುಗಿಗೆ ಮದುವೆ ಪ್ರಸ್ತಾವವಿಟ್ಟರೆ ಆಕೆಗೆ ಏನಾಗಬಹುದು? ಖುಷಿಯಿಂದ ಚೆಂದದ ನಗು ಅರಳಬಹುದು, ಇಷ್ಟವಿಲ್ಲದಿದ್ದರೆ ಆತನ ಕೆನ್ನೆಗೊಂದು ಏಟು ಖರ್ಚಾಗಬಹುದು. ಆದರೆ ಮೆಕ್ಸಿಕೋದಲ್ಲಿ ಬೆನೆಟಿಜ್ ಎಂಬಾತ ತನ್ನ ಗೆಳತಿಯ ಮುಂದೆ ಮೊಣಕಾಲೂರಿ, ಕೈಯಲ್ಲಿ ಉಂಗುರವಿದ್ದ ಪೆಟ್ಟಿಗೆ ಹಿಡಿದು 'ನನ್ನ ಮದುವೆಯಾಗುತ್ತೀಯಾ?' ಎಂದು ಕೇಳಿದ್ದಷ್ಟೇ. ಆತನ ಗೆಳತಿ ರೆಂಟೇರಿಯ ಎಚ್ಚರ ತಪ್ಪಿ ಬಿದ್ದುಬಿಟ್ಟಳಂತೆ. ಇಷ್ಟೊಂದು ಆಘಾತ ಕೊಡುವ ಪ್ರಶ್ನೆ ಆ ಬಡಪಾಯಿಗೆ ಪರೀಕ್ಷೆಯಲ್ಲೋ, ಸಂದರ್ಶನದಲ್ಲೋ ಎದುರಾಗಿರಲಿಕ್ಕಿಲ್ಲ.



ಚೀನಾದ ಹುನಾನ್ ಪ್ರಾಂತ್ಯದ ಸಾರ್ವಜನಿಕ ಉದ್ಯಾನದಲ್ಲಿ ಪಾರದರ್ಶಕ ಗಾಜಿನ ಗೋಡೆ, ಬಾಗಿಲಿರುವ ಶೌಚಾಲಯ ತೆರೆಯಲಾಗಿದೆಯಂತೆ. ಖಾಸಗೀತನವನ್ನು ಬಹಿರಂಗಪಡಿಸುವ ಗಟ್ಟಿಗರು ಇದನ್ನು ಬಳಸುವ ಧೈರ್ಯ ತೋರುತ್ತಿದ್ದಾರಂತೆ. ನಿಸರ್ಗದ ಕರೆಗೆ ಓಗೊಟ್ಟವರು ಹೊರಗಿನ ಸುಂದರ ದೃಶ್ಯ ನೋಡುತ್ತ ಮೈಮರೆತರೆ, ಹೊರಗಿರುವವರು ಒಳಗಿನ ರಮ್ಯ ದೃಶ್ಯ ನೋಡುತ್ತ ಕಾಲಹರಣ ಮಾಡಬಹುದು.



ಜಪಾನಿನ ಸೋಮಾರಿ ಗಂಡಂದಿರು ಮನೆಗೆಲಸದಲ್ಲಿ ಹೆಂಡತಿಯರಿಗೆ ನೆರವಾಗುವಂತೆ ಪ್ರೇರೇಪಿಸಲು ಅಲ್ಲಿಯ ಗವರ್ನರ್ ಈ ರೀತಿಯ ಉಡುಪು ತೊಟ್ಟು ಪ್ರಚಾರಕ್ಕೆ ಇಳಿದಿದ್ದಾರಂತೆ. 7.5 ಕೆಜಿ ಭಾರದ ಈ ಉಡುಪು ತೊಟ್ಟ ಗವರ್ನರ್ ಪಟ್ಟ ಪಡಿಪಾಟಲಿನ ವಿಡಿಯೊ ಅಲ್ಲಿ ಹರಿದಾಡುತ್ತಿದೆಯಂತೆ. ಇದರಿಂದ ಗಂಡಸರು ಮನೆಯೊಳಗೆ ಪೊರಕೆ ಹಿಡಿಯುತ್ತಾರೋ ಅಥವಾ ಮಹಿಳೆಯರು ಬಸಿರು– ಬಾಣಂತನ ಬೇಡ ಎಂದು ಕಚೇರಿಗೆ ಸೀಮಿತಗೊಳ್ಳುತ್ತಾರೋ! ಕಾದು ನೋಡಬೇಕಷ್ಟೆ.

ಹಾವು ಮನುಷ್ಯನಿಗೆ ಕಚ್ಚಿದರೆ ತಿರುಗಿ ಆ ಹಾವನ್ನೇ ಕಚ್ಚಿ ಸಾಯಿಸಿದ ಕೆಲವು ಘಟನೆಗಳು ನಮ್ಮ ಮುಂದಿವೆ. ಆದರೆ ಇಸ್ರೇಲಿನಲ್ಲಿ ರೂಪದರ್ಶಿಗೆ ಕಚ್ಚಿದ ಹಾವೊಂದು ತಾನೇ ಪ್ರಾಣ ಬಿಟ್ಟಿತಂತೆ. ಹಾವನ್ನು ಮೈಗೆ ಸುತ್ತಿಕೊಂಡು ಚಿತ್ರೀಕರಣದಲ್ಲಿ ನಿರತಳಾಗಿದ್ದ ರೂಪದರ್ಶಿ ಹಾವಿಗೆ ಮುತ್ತಿಕ್ಕಲು ಹೋದಾಗ ಸಿಟ್ಟಿಗೆದ್ದ ಹಾವು ಆಕೆಯ ತೆರೆದ ಎದೆಗೆ ಕಚ್ಚಿತಂತೆ. ಹಾವಿನಿಂದ ಬಿಡಿಸಿಕೊಂಡ ರೂಪದರ್ಶಿಗೆ ಆ್ಯಂಟಿ ಟಿಟಾನಸ್ ಚುಚ್ಚುಮದ್ದಷ್ಟೇ ಸಾಕಾದರೆ, ಆಕೆಗೆ ಕಚ್ಚಿದ ಹಾವು ಸತ್ತೇ ಹೋಯಿತಂತೆ. ಇಷ್ಟಕ್ಕೆಲ್ಲಾ ಕಾರಣ ರೂಪದರ್ಶಿ ಎದೆ ಉಬ್ಬಿಸಿಕೊಳ್ಳಲು ಮಾಡಿಸಿಕೊಂಡ ಪ್ಲಾಸ್ಟಿಕ್ ಸರ್ಜರಿಯಲ್ಲಿ ಬಳಸಲಾದ ಸಿಲಿಕಾನ್ ಎಂಬ ರಾಸಾಯನಿಕ ವಸ್ತು ಹಾವಿಗೆ ವಿಷವಾಗಿ ಪರಿಣಮಿಸಿದ್ದು. ವಿಷಯಕನ್ಯೆಯ ಸಹವಾಸ ಮಾಡಿದವರಿಗಷ್ಟೇ ಗೊತ್ತು, ಎಷ್ಟು ಅಪಾಯ ಅಂತ.



ಇತ್ತೀಚೆಗೆ ಇಂಗ್ಲೆಂಡ್‌ನ ಯಾರ್ಕ್ ಕಲಾ ಗ್ಯಾಲರಿಯಲ್ಲಿ ನಡೆದ ಪ್ರದರ್ಶನವಿದು. ಗೋಡೆಯ ಮೇಲೆ ಚಿತ್ರ ಬಿಡಿಸಿದ ಕ್ಯಾನ್‌ವ್ಯಾಸ್ ಆಗಿದ್ದರೆ ವಿಶೇಷವೇನೂ ಇರುತ್ತಿರಲಿಲ್ಲ ಬಿಡಿ. ಆದರೆ ಅಡುಗೆ ಮನೆಯಲ್ಲಿ ಮಾಂಸದ ಅಡುಗೆಗೆ ಬೇಕಾದ ಮುಖ್ಯ ಸಾಮಗ್ರಿಯೇ ಗೋಡೆಯಲ್ಲಿ ಕಲೆಯಾಗಿ ಬೇಯಲು ತಯಾರಾಗಿ ಕೂತಿದೆ. ಈ ಕಲೆಯಲ್ಲಿ ನಿಜಕ್ಕೂ ಹಸಿ ಹಸಿ ತಾಜಾ ವಾಸನೆಯೇ ತುಂಬಿಕೊಂಡು ನೈಜವಾಗಿ ಹೊರಹೊಮ್ಮಿದೆ ಎನ್ನಬಹುದು.



ನ್ಯೂಯಾರ್ಕ್‌ನ ಪರಿಸರ ಕಾರ್ಯಕರ್ತ ಗ್ರೀನ್‌ಫೀಲ್ಡ್ 30 ದಿನಗಳ ಕಾಲ ತನ್ನಿಂದ ಸೃಷ್ಟಿಯಾದ ಕಸ, ತ್ಯಾಜ್ಯ ವಸ್ತುಗಳನ್ನು ಮೈಮೇಲೆ ಹೊತ್ತುಕೊಂಡು ಓಡಾಡಿದನಂತೆ. ನಿತ್ಯ ಸುಮಾರು 2 ಕೆಜಿಯಂತೆ ಒಂದು ತಿಂಗಳಲ್ಲಿ 60 ಕೆಜಿ ಕಸ ಆತನಿಂದ ಸೃಷ್ಟಿಯಾಗಿದ್ದು, ಮುಂದೊಮ್ಮೆ ಈ ಓಡಾಡುವ ಕಸದ ತೊಟ್ಟಿ ನೀವೂ ಆಗಬಹುದು ಎಂದು ತೋರಿಸಿಕೊಟ್ಟಿದ್ದಾನೆ.